# ಆಧುನಿಕ ಭಾರತದಲ್ಲಿ ಪ್ರಾಚೀನ ಸಂಸ್ಕೃತ ವಾಙ್ಮಯದ ಕೊಡುಗೆ ಮತ್ತು ಅನ್ವಯಗಳು - ಸಂಸ್ಕೃತ ಮತ್ತು ಕೃಷಿ

ದಿವ್ಯಶ್ರೀ ಜಗದೀಶ ಪೈ ಬಿ. [1] ಮತ್ತು ಭಾಸ್ಕರ ವಿ ಭಟ್ [2]
[1] ಶ್ರೀನಿವಾಸ ವಿಶ್ವವಿದ್ಯಾನಿಲಯ ಮುಕ್ಕ, ಮಂಗಳೂರು, ಭಾರತ.
ORCID ID: 0000-0001-9838-9701; E-mail: jpaigeo@gmail.com
[2] ಪ್ರಾಧ್ಯಾಪಕರು, ಶ್ರೀನಿವಾಸ ವಿಶ್ವವಿದ್ಯಾನಿಲಯ ಮುಕ್ಕ, ಮಂಗಳೂರು, ಭಾರತ.
E-mail: sondabhaskarabhat@gmail.com

**Area/Section:** Indian Knowledge System.
**Type of the Paper:** Exploratory Research.
**Type of Review:** Peer Reviewed as per |C|O|P|E| guidance.
**Indexed in:** OpenAIRE.
**DOI:** https://doi.org/10.5281/zenodo.12609221
**Google Scholar Citation:** IJPL

**How to Cite this Paper:**
ದಿವ್ಯಶ್ರೀ ಜಗದೀಶ ಪೈ ಬಿ. ಮತ್ತು ಭಾಸ್ಕರ ವಿ ಭಟ್ (2024). ಆಧುನಿಕ ಭಾರತದಲ್ಲಿ ಪ್ರಾಚೀನ ಸಂಸ್ಕೃತ ವಾಙ್ಮಯದ ಕೊಡುಗೆ ಮತ್ತು ಅನ್ವಯಗಳು - ಸಂಸ್ಕೃತ ಮತ್ತು ಕೃಷಿ. *International Journal of Philosophy and Languages (IJPL), 3*(1), 51-58. DOI: https://doi.org/10.5281/zenodo.12609221

**International Journal of Philosophy and Languages (IJPL)**
A Refereed International Journal of Srinivas University, India.

Received on: 11/06/2024
Published on: 30/06/2024

Crossref DOI: https://doi.org/10.47992/IJPL.2583.9934.0028

© With Authors.

This work is licensed under a Creative Commons Attribution-Non-Commercial 4.0 International License subject to proper citation to the publication source of the work.
**Disclaimer:** The scholarly papers as reviewed and published by Srinivas Publications (S.P.), India are the views and opinions of their respective authors and are not the views or opinions of the SP. The SP disclaims of any harm or loss caused due to the published content to any party.

# ಆಧುನಿಕ ಭಾರತದಲ್ಲಿ ಪ್ರಾಚೀನ ಸಂಸ್ಕೃತ ವಾಙ್ಮಯದ ಕೊಡುಗೆ ಮತ್ತು ಅನ್ವಯಗಳು - ಸಂಸ್ಕೃತ ಮತ್ತು ಕೃಷಿ

ದಿವ್ಯಶ್ರೀ ಜಗದೀಶ ಪೈ ಬಿ. [1] ಮತ್ತು ಭಾಸ್ಕರ ವಿ ಭಟ್ [2]
[1] ಶ್ರೀನಿವಾಸ ವಿಶ್ವವಿದ್ಯಾನಿಲಯ ಮುಕ್ಕ, ಮಂಗಳೂರು, ಭಾರತ.
ORCID ID: 0000-0001-9838-9701; E-mail: jpaigeo@gmail.com
[2] ಪ್ರಾಧ್ಯಾಪಕರು, ಶ್ರೀನಿವಾಸ ವಿಶ್ವವಿದ್ಯಾನಿಲಯ ಮುಕ್ಕ, ಮಂಗಳೂರು, ಭಾರತ.
E-mail: sondabhaskarabhat@gmail.com

**ಸಾರ**

ಭಾರತ ಒಂದು ಕೃಷಿ ರಾಷ್ಟ್ರ; ರೈತ ದೇಶದ ಬೆನ್ನೆಲುಬು ಮತ್ತು ಅಡಿಪಾಯ. ಪ್ರಾಚೀನ ವೈದಿಕ ಕಾಲದಿಂದಲೂ ಭಾರತೀಯರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೃಷಿ ಮಾನವನ ಜೀವನೋಪಾಯದ ಪ್ರಮುಖ ಸಾಧನವಾಗಿದೆ.ಭಾರತೀಯ ಜ್ಯೋತಿಷ್ಯ ಶಾಸ್ತ್ರದಲ್ಲಿ ಮಾಸ,ಗ್ರಹ,ತಿಥಿ,ನಕ್ಷತ್ರ, ವಾಯು,ಮುಹೂರ್ತ - ಇವುಗಳ ಆಧಾರದಲ್ಲಿ ಮಳೆಯ ಗಣನೆಯನ್ನು ಕರಾರುವಕ್ಕಾಗಿ ನಿರ್ಧರಿಸುವ ಬಗೆಯನ್ನು ತಿಳಿಸಿದ್ದಾರೆ.ಅನೇಕ ಗ್ರಂಥಗಳಲ್ಲಿ ಈ ಬಗ್ಗೆ ಉಲ್ಲೇಖಗಳನ್ನು ಉದಾಹರಿಸಲಾಗಿದೆ. ಕೃಷಿಗೆ ಅಗತ್ಯವಿರುವ ಮಳೆ -ಯಾಕೆ,ಯಾವಾಗ,ಹೇಗೆ ಉಂಟಾಗುತ್ತದೆ ಹಾಗೂ ಅದರ ಕಾರಣವನ್ನು ಮತ್ತು ಇಂದಿಗೆ ಅದರ ಅನ್ವಯವನ್ನು ಪರಾಶರ ಋಷಿಗಳು ಬರೆದ ಕೃಷಿಪರಾಶರ ಗ್ರಂಥದ ಆಧಾರದಲ್ಲಿ ಕಂಡುಕೊಳ್ಳುವ ಪ್ರಯತ್ನವನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ.

**ಕೂಟ ಶಬ್ದಗಳು -** ಕೃಷಿ, ಪರಾಶರ, ಮಳೆ, ಗ್ರಹ, ಮೋಡಗಳ ಪ್ರಕಾರ, ಸದ್ಯೋವೃಷ್ಟಿಜ್ಞಾನ, ಬರ ಎಚ್ಚರಿಕೆ.

## 1. ಪೀಠಿಕೆ :



"ಕೃಷಿ" -

ಈ ಪದದ ವ್ಯಾಖ್ಯಾನವು "ಕರ್ಷಣ" ಎಂದರ್ಥ.ಕೃಷಿ ಅಂದರೆ, ಬಿತ್ತನೆ ಮತ್ತು ಸಂಬಂಧಿಸಿದ ಇತರ ಚಟುವಟಿಕೆಗಳನ್ನು ನಡೆಸುವುದು.
"कृषितो नास्ति दुर्भिक्षम्"-"ಕೃಷಿಯಿದ್ದರೆ ಕ್ಷಾಮವಿಲ್ಲ" ಎಂಬ ನಾಣ್ಣುಡಿಯು ಕೃಷಿಯ ಮಹತ್ವವನ್ನು ತಿಳಿಸುತ್ತದೆ.

"अन्नं प्राणा बलं चान्नमन्नं सर्वार्थसाधनम्।
देवासुरमनुष्याश्च सर्वे चान्नोपजीविनः ॥ (६)"

ಎಂದರೆ ಆಹಾರವು ಜೀವನ ಮತ್ತು ಶಕ್ತಿ, ಮತ್ತು ಆಹಾರವು ಎಲ್ಲಾ ಉದ್ದೇಶಗಳ ಸಾಧನವಾಗಿದೆ.ಎಲ್ಲಾ ದೇವತೆಗಳು, ಅಸುರರು ಮತ್ತು ಮಾನವರು ಆಹಾರದ ಮೇಲೆ ಅವಲಂಬಿತರಾಗಿರುವರು. ಕೃಷಿ ಎಲ್ಲರ ಆಹಾರದ ಮೂಲವಾಗಿದೆ.
ಭಾರತವು ಹಳ್ಳಿಗಳ ದೇಶ. ಇಲ್ಲಿ ಕೃಷಿಯೇ ಮುಖ್ಯ ಚಟುವಟಿಕೆ. ಭಾರತದಲ್ಲಿ ಕೃಷಿಯು ಮಳೆಯನ್ನು ಅವಲಂಬಿಸಿರುತ್ತದೆ. ನದಿಗಳು ಮತ್ತು ಕೆರೆಗಳ ಸಮೀಪವಿರುವ ಜಾಗದಲ್ಲಿ, ಹೊಲಕ್ಕೆ- ನೀರು ಹೆಚ್ಚಾಗಿ ಲಭ್ಯವಿರುತ್ತದೆ.
ಮಳೆಯ ಬಗ್ಗೆ ಬೃಹತ್ ಸಂಹಿತೆ, ಕಶ್ಯಪ ಕೃಷಿ ಸೂಕ್ತಿ, ವೃಕ್ಷಾಯುರ್ವೇದ, ಕೃಷಿ ಪರಾಶರ ಗ್ರಂಥ, ಋಗ್ವೇದ ಕೃಷಿ ಸೂಕ್ತ ಇತ್ಯಾದಿ ಗ್ರಂಥಗಳಲ್ಲಿ ಮಾತ್ರವಲ್ಲದೆ ಕೃಷಿ ಮತ್ತು ಮಳೆಗೆ ಸಂಬಂಧಿಸಿದ ಅನೇಕ ಮಂತ್ರಗಳಿವೆ. ಭೂ ಸೂಕ್ತ, ಮಾಂಡೂಕ್ಯ ಸೂಕ್ತ, ಕೌಟಿಲ್ಯನ ಅರ್ಥಶಾಸ್ತ್ರ(ಕ್ರಿ.ಪೂ. 400) ಇತ್ಯಾದಿಗಳಲ್ಲಿ ಭೂಮಿ ನಿರ್ಮಾಣ, ನೀರು ನಿರ್ವಹಣೆ ಮತ್ತು ನೀರಾವರಿ,ಕೀಟ ನಿಯಂತ್ರಣ, ಬೀಜ ಸಂರಕ್ಷಣೆ, ಸಂಗ್ರಹಣೆ ಮುಂತಾದ ವಿಷಯಗಳ ಕುರಿತು ವಿವರಿಸಲಾಗಿದೆ. ಇವುಗಳು ಸಮಕಾಲೀನ ಕೃಷಿ ಪದ್ಧತಿಗಳೊಂದಿಗೆ ಹೊಂದಿಕೆಯಾಗುವ ಮೌಲ್ಯಯುತ ಒಳನೋಟಗಳನ್ನು ನೀಡುತ್ತವೆ. ವೈದಿಕ ಆರ್ಯರು ಕೃಷಿ ಅವಲಂಬಿತರಾಗಿದ್ದರು ಮತ್ತು ಕೃಷಿ ಕೇಂದ್ರಿತರಾಗಿದ್ದರು. ಇದು ಪ್ರಾಚೀನ ಮತ್ತು

ಆಧುನಿಕ ಕೃಷಿ ಜ್ಞಾನದ ನಡುವಿನ ಸಂಪರ್ಕವು ಪ್ರಾಚೀನ ಭಾರತದಲ್ಲಿ ಅಭಿವೃದ್ಧಿಪಡಿಸಿದ ಕೃಷಿ ಪದ್ಧತಿಗಳ ಐತಿಹಾಸಿಕ ನಿರಂತರತೆ ಮತ್ತು ಪರಿಣಾಮಕಾರಿತ್ವವನ್ನು ಒತ್ತಿಹೇಳುತ್ತದೆ. ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಕೃಷಿ ಪರಾಶರ ಗ್ರಂಥದಲ್ಲಿ ಉಲ್ಲೇಖಗೊಂಡಿರುವ ಮಳೆನೀರಿನ ಜ್ಞಾನದ ಮತ್ತು ಅದರ ಇಂದಿನ ಉಪಯುಕ್ತತೆಯ ಬಗ್ಗೆ ಸೋದೋಹಾರಣವಾಗಿ ವಿವರಿಸಲಾಗಿದೆ.

## 2. ಕೃಷಿ ಪರಾಶರ :

"ಕೃಷಿ ಪರಾಶರ" ಗ್ರಂಥವನ್ನು ಬರೆದ ಪರಾಶರರು ಮಂತ್ರದೃಷ್ಟಾರರು, ಶಾಸ್ತ್ರಗಳ ವಿದ್ವಾಂಸರು, ಸಂಪೂರ್ಣ ಸತ್ಯವನ್ನು ತಿಳಿದವರು ಮತ್ತು ಸ್ಮೃತಿಗಳ ಲೇಖಕರು. ಅವರು ಮಹಾನ್ ಋಷಿ ವಸಿಷ್ಠನ ಮೊಮ್ಮಗ, ಗೋತ್ರದ ಪ್ರಾರಂಭಿಕ, ವೇದ ಸೂಕ್ತಗಳ ದಾರ್ಶನಿಕ ಮತ್ತು ಗ್ರಂಥಗಳ ಕರ್ತೃ.
ಕೃಷಿಪರಾಶರ ಗ್ರಂಥವು ಒಟ್ಟು ಮೂವತ್ತಾರು ಅಧ್ಯಾಯಗಳು, ಇನ್ನೂರನಲವತ್ತೂರು ಶ್ಲೋಕಗಳನ್ನು ಒಳಗೊಂಡಿದ್ದು ಹೆಚ್ಚಿನವು ಜನಪ್ರಿಯವಾದ ಅನುಷ್ಟುಪ್ ಛಂದಸ್ ನಲ್ಲಿ ಬರೆಯಲ್ಪಟ್ಟಿವೆ. ಇದರಲ್ಲಿ ವಿವರಿಸಿದ ಕೃಷಿಯ ತತ್ವವನ್ನು ರೈತರು ತಮ್ಮ ವ್ಯವಹಾರಕ್ಕೆ ಅನ್ವಯಿಸುವ ಮೂಲಕ ಲಾಭವನ್ನು ಪಡೆಯಬಹುದು, ಭೌಗೋಳಿಕ ಹವಾಮಾನದ ಮೂಲಭೂತ ವಿವರಣೆಯನ್ನು ಒಳಗೊಂಡಿರುವ ರೈತರ ಸಿದ್ಧ ಮಾಹಿತಿ ಇದರಲ್ಲಿದೆ. ಕೃಷಿ ಚಟುವಟಿಕೆಗಳ ಯೋಜನೆ ಮತ್ತು ನಿರ್ವಹಣೆ, ಹವಾಮಾನಶಾಸ್ತ್ರದಂತಹ ಎಲ್ಲಾ ಅಂಶಗಳು, ಕೃಷಿಗೆ ಸಂಬಂಧಿಸಿದ ವಿಷಯಗಳನ್ನು ಕೃಷಿ ಉಪಕರಣಗಳು ಮತ್ತು ಉಪಕರಣಗಳು, ಬೀಜ ಸಂಗ್ರಹಣೆ ಮತ್ತು ಸಂರಕ್ಷಣೆ, ಉಳುಮೆ ಮತ್ತು ಹೊಲದ ತಯಾರಿಯಿಂದ ಬೆಳೆಗಳ ಕೊಯ್ಲು,ಕೃಷಿಯ ಪ್ರಾಮುಖ್ಯತೆ ,ಮೋಡಗಳು ,ನಕ್ಷತ್ರ ಹಾಗೂ ಮಾಸದ ಪ್ರಕಾರ ಮಳೆಯ ಜ್ಞಾನ , ತಕ್ಷಣದ ಮಳೆಯ ಗುಣಲಕ್ಷಣಗಳು, ಗ್ರಹಗಳ ಪರಿಚಲನೆ ಮತ್ತು ಮಳೆಯ ಗುಣಲಕ್ಷಣಗಳು, ಬರ ಲಕ್ಷಣಗಳು,ಜಲ ಸಂರಕ್ಷಣೆ ಇತ್ಯಾದಿಗಳನ್ನು ಒಳಗೊಂಡಿರುವ ಎಲ್ಲಾ ಕೃಷಿ ಪ್ರಕ್ರಿಯೆಗಳನ್ನು ವಿವರಿಸಲಾಗಿದೆ.

## 3. ವರ್ಷಾ ಜ್ಞಾನ :

ಎಲ್ಲಾ ಕೃಷಿಯ ಮೂಲ ಮಳೆ ಆದ್ದರಿಂದ ಪ್ರಾರಂಭದಲ್ಲಿ ಬಹಳ ಎಚ್ಚರಿಕೆಯಿಂದ ಮಳೆಯ ಜ್ಞಾನವನ್ನು ತಿಳಿಯುವುದು ಅತೀ ಅಗತ್ಯ. ಪಂಚಾಂಗದ ಪ್ರಕಾರ ಆಯಾ ಸಂವತ್ಸರದ ರಾಜನ ಮತ್ತು ಮಂತ್ರಿಯ ಸ್ಥಾನದಲ್ಲಿರುವ ಗ್ರಹಗಳು ಮತ್ತು ಅವುಗಳಿಗೆ ಸಂಬಂಧಪಟ್ಟಂತೆ ಇರುವ ಮೋಡಗಳು ಮತ್ತು ಮಳೆ -ಇದರ ಸರಿಯಾದ ಜ್ಞಾನದ ಅಗತ್ಯವಿದೆ.
ಋಷಿ ಪರಾಶರರ ಪ್ರಕಾರ ಎಲ್ಲಾ ರೀತಿಯ ಕೃಷಿಯು "ಮಳೆ ಅಥವಾ ಮಳೆಯನ್ನು ನೀಡುವ ಮೋಡಗಳ ಮೇಲೆ ಅವಲಂಬಿತವಾಗಿದೆ". ಆದ್ದರಿಂದ, ಎಲ್ಲಾ ರೈತರು ಸಂಭವಿಸುವ ಮಳೆಯ ಪ್ರಮಾಣವನ್ನು ಗಮನಿಸಬೇಕು. ಅಂತರ್ಜಲದ ಕೊರತೆಯಿಂದಾಗಿ, ಕೃಷಿ ಸಂಪೂರ್ಣವಾಗಿ ಮಳೆಯ ಮೇಲೆ ಅವಲಂಬಿತವಾಗಿದೆ. ಆದ್ದರಿಂದ, ಸಂಭವಿಸುವ ಮಳೆಯ ಪ್ರಮಾಣವನ್ನು ಊಹಿಸುವುದು ಮುಖ್ಯವಾಗಿದೆ.
वृष्टिमूला कृषिः सर्वा वृष्टिमूला हि जीवनम्
तस्मादादौ प्रयत्नेन वृष्टिज्ञानं समाचरेत् ॥(१०.३)
ಮಳೆಯ ಮೇಲೆ ಅವಲಂಬಿತವಾದ ಕೃಷಿಯು ಎಲ್ಲಾ ಜೀವಿಗಳ ಜೀವನಾಧಾರವಾಗಿದೆ. ಆದ್ದರಿಂದ ಮಳೆಯ ಜ್ಞಾನವನ್ನು (ವರ್ಷಾ ಜ್ಞಾನವನ್ನು) ಮೊದಲು ಪಡೆಯಬೇಕು.
ವರ್ಷಾ ಜ್ಞಾನವನ್ನು ವಾಯು, ಮೋಡ,ಗ್ರಹಗಳ ಚಲನೆ, ಭೂಮಿ,ಸದ್ಯೋವೃಷ್ಟಿ- ಈ ಐದು ಮೂಲಗಳಿಂದ ತಿಳಿಯಬಹುದು. .

*ವಾಯು ಜ್ಞಾನ - ಪಾವಕ, ಸ್ಥಾಪಕ ಮತ್ತು ಜ್ಞಾಪಕ - ಇವು ವಾಯುವಿನ ಮೂರು ವಿಧಗಳು. ಇವುಗಳಲ್ಲಿ ಪಾವಕ ವಾಯುವು ಬೇರೆ ಬೇರೆ ದಿಶೆಯಲ್ಲಿ ಸಂಚರಿಸುವ ಮೇಘಗಳನ್ನು ಒಂದುಗೂಡಿಸುತ್ತದೆ. ಮೇಘಗಳಿಂದ ಮಳೆಯು ಸುರಿಯುವಂತೆ ಪ್ರೇರೇಪಿಸುವ ಕೆಲಸವನ್ನು ಸ್ಥಾಪಕವಾಯುವು ಮಾಡುತ್ತದೆ. ಜ್ಞಾಪಕ ವಾಯುವು ಮೇಘಗಳು ಮಳೆಯನ್ನು ಸುರಿಸುವ ಸಂದರ್ಭದಲ್ಲಿ ಅನುಕೂಲಕರವಾಗಿ ವಾಯುವು ಚಲಿಸುವಂತೆ ಮಾಡಿ ತನ್ಮೂಲಕ ಮೇಘಗಳು ಶುಷ್ಕವಾಗದಂತೆ ಮತ್ತು ಇಳೆಗೆ ಮಳೆಯು ಸರಿಯಾಗಿ ದೊರಕುವಂತೆ ಮಾಡುತ್ತದೆ.

*ಮೇಘ ಜ್ಞಾನ -
आवर्तश्चैव संवर्तः पुष्करो द्रोण एव च । (२४.१)
चत्वारो जलदाः प्रोक्ता आवर्तादि यथाक्रमम् ॥ (२४.२)

ಮೋಡಗಳ ಪ್ರಕಾರಗಳು ಕ್ರಮವಾಗಿ - ಆವರ್ತ(ಮಳೆಯು ಒಂದು ನಿರ್ದಿಷ್ಟ ಸ್ಥಳಕ್ಕೆ ಸೀಮಿತವಾಗಿದೆ ), ಸಂವರ್ತ(ಎಲ್ಲೆಡೆ ನೀರು ಇರುತ್ತದೆ; ), ಪುಷ್ಕರ(ನೀರು ವಿರಳವಾಗಿರುತ್ತದೆ) ಮತ್ತು ದ್ರೋಣ(ಭೂಮಿಯ ಮೇಲೆ ನೀರು ಹೇರಳವಾಗಿರುತ್ತದೆ) - ಈ ನಾಲ್ಕು ವಿಧದ ಮಳೆಯನ್ನು ಸುರಿಯುವುದರಲ್ಲಿ ಪರಸ್ಪರ ಭಿನ್ನವಾಗಿವೆ.
ಶಾಲಿವಾಹನ ಶಕ ಸಂವತ್ಸರದ ವರ್ಷಕ್ಕೆ ಮೂರನ್ನು ಸೇರಿಸಿ ಪಡೆದ ಮೊತ್ತವನ್ನು ನಾಲ್ಕರಿಂದ ಭಾಗಿಸಿ, ಶೇಷವು ಕ್ರಮವಾಗಿ ಆವರ್ತ, ಸಂವರ್ತ,ಪುಷ್ಕರ,ದ್ರೋಣ - ಈ ರೀತಿಯಾಗಿ ಮೋಡದ ಪ್ರಕಾರವನ್ನು ವ್ಯಾಖ್ಯಾನಿಸುತ್ತದೆ.
ಉದಾಹರಣೆ: ಕ್ರಿ.ಶ. 2024(ಶಾ.ಶ.1946)ರ ಮಳೆಯ ಪ್ರಕಾರವು ಕೆಳಗಿನ ಲೆಕ್ಕಾಚಾರದಂತೆ ಇರುತ್ತದೆ.
1946+3=1949/4 ಇಲ್ಲಿ ಶೇಷ 1 ಉಳಿದಿದೆ ಆದ್ದರಿಂದ ಈ ವರ್ಷ ಆವರ್ತ ಮೋಡಗಳ ಪ್ರಕಾರವು ಕಂಡುಬರುತ್ತದೆ.

*ಗ್ರಹಗಳ ಸಂಚಾರದ ಸಮಯದಲ್ಲಿ ಮಳೆಯ ಜ್ಞಾನ -
ಯಾವ ರಾಶಿಯಲ್ಲಿ ಸೂರ್ಯನಿರುವನೋ ಅದರ ಮುಂದಿನ ರಾಶಿಯಲ್ಲಿ ಮಂಗಳನಿದ್ದರೆ ಮೋಡವು ಶುಷ್ಕವಾಗಿರುತ್ತದೆ. ಮಂಗಳ ಅಥವಾ ರವಿ ಗ್ರಹಗಳು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಸಂಚರಿಸುವಾಗ ಮಳೆಯು ನಿಶ್ಚಿತವಾಗಿ ಉಂಟಾಗುತ್ತದೆ. ಗುರುವು ಸಂಕ್ರಮಣದ ಕಡೆ ಚಲಿಸುತ್ತಿವಾಗ ಭೂಮಿಯ ಮೇಲೆ ವರ್ಷಧಾರೆ ಉಂಟಾಗುತ್ತದೆ. ಗ್ರಹಗಳ ಉದಯ ಮತ್ತು ಅಸ್ತದ ಸಮಯದಲ್ಲಯೂ ಕೂಡಾ ಮೇಘಗಳು ಮಳೆಯನ್ನು ಸುರಿಸುತ್ತವೆ. ಗುರುವು ಚಿತ್ರಾ ನಕ್ಷತ್ರ ಹಾಗೂ ಸ್ವಾತೀ ನಕ್ಷತ್ರದಲ್ಲಿ ಚಲಿಸುವಾಗ ಉತ್ತಮ ಮಳೆಯಾಗುತ್ತದೆ.

*ಭೂಮಿ ಜ್ಞಾನ -
ಭೂಪ್ರಕೃತಿಯು ಕೂಡಾ (ಬೆಟ್ಟಗುಡ್ಡಗಳು , ಸಮತಟ್ಟಾದ ನೆಲ, ಮಿಶ್ರನೆಲ) ಮಳೆಯು ಬೀಳುವ ಪ್ರಮಾಣದಲ್ಲಿ ಏರುಪೇರು ತರುತ್ತದೆ.

*ಸದ್ಯೋವೃಷ್ಟಿಜ್ಞಾನ -
ನೀರಿನ ಒಳಗೆ ಇದ್ದು ಅಥವಾ ನೀರನ್ನು ತೆಗೆದುಕೊಂಡು ಅಥವಾ ನೀರಿನ ಸಮೀಪದಲ್ಲಿ ನಿಂತುಕೊಂಡು ಮಳೆಯ ಬಗ್ಗೆ ಪ್ರಶ್ನಿಸಿದರೆ, ಇರುವೆಗಳು ಮೊಟ್ಟೆಯನ್ನು ಹೊತ್ತುಕೊಂಡು ಹೋಗುತ್ತಿದ್ದರೆ , ಅನಿರೀಕ್ಷಿತವಾಗಿ ಕಪ್ಪೆಗಳು ವಟಗುಟ್ಟುತ್ತಿದ್ದರೆ, ಬೆಕ್ಕು, ಮುಂಗುಸಿ, ಸರ್ಪಗಳು ಅಥವಾ ಬಿಲಿದಲ್ಲಿ ವಾಸಿಸುವ ಯಾವುದೇ ಇತರ ಪ್ರಾಣಿಗಳು ಅತ್ತಿಂದಿತ್ತ ಓಡುತ್ತಿದ್ದರೆ , ನವಿಲು ನೃತ್ಯ ಮಾಡುತ್ತಿದ್ದರೆ ಕೂಡಲೇ ಮಳೆಯಾಗುವುದೆಂದು ತಿಳಿಯಬೇಕು ಎಂದು ಪರಾಶರರು ಹೇಳುತ್ತಾರೆ.

## 4. ಆಯಾ ವರ್ಷದ ಗ್ರಹಗಳ ರಾಜನನ್ನು ತಿಳಿಯುವ ಬಗೆ :

शाकं त्रिगुणितं कृत्वा द्वियुतं मुनिना हरेत् ।
भागशिष्टो नृपो ज्ञेयो नृपान्मन्त्री चतुर्थकः ॥२.३॥

ಪ್ರತೀ ಶಾಲಿವಾಹನ ಶಕ ಸಂವತ್ಸರ ವರ್ಷಕ್ಕೆ ಗ್ರಹಗಳ ರಾಜರನ್ನು ಎಣಿಸಬೇಕೆಂದು ಋಷಿ ಪರಾಶರ ಹೇಳುತ್ತಾರೆ. ಇದನ್ನು ಸಾಮಾನ್ಯವಾಗಿ ಶಕ ಸಂವತ್ಸರ ವರ್ಷದ ಮೊದಲಲ್ಲಿ ಮಾಡಲಾಗುತ್ತದೆ. ಶಾಲಿವಾಹನ ಶಕ ವರ್ಷಗಳ ಸಂಖ್ಯೆಯನ್ನು ಮೂರರಿಂದ ಗುಣಿಸಿ, ಮತ್ತು ಉತ್ಪನ್ನದ ಪಡೆದ ಸಂಖ್ಯೆಗೆ ಎರಡನ್ನು ಸೇರಿಸಿ ಮತ್ತು 7 ರಿಂದ ಭಾಗಿಸಿ ಬರುವ ಶೇಷವನ್ನು ರಾಜ ಎಂದು ಕರೆಯಲಾಗುತ್ತದೆ.
ಏಳು ಗ್ರಹಗಳು:
1. ಭಾನುವಾರ: ಸೂರ್ಯ.
2. ಸೋಮವಾರ - ಚಂದ್ರ.
3. ಮಂಗಳವಾರ: ಮಂಗಳ.
4. ಬುಧವಾರ - ಬುಧ.
5.ಗುರುವಾರ: ಗುರು.
6.ಶುಕ್ರವಾರ - ಶುಕ್ರ.
7. ಶನಿವಾರ - ಶನಿ.

ಸೂರ್ಯನು ಮಳೆಯ ರಾಜನಾಗಿದ್ದರೆ, ರೈತರು ಸಾಧಾರಣ ಮಳೆಯನ್ನು ನಿರೀಕ್ಷಿಸಬೇಕು ಎಂದು ಋಷಿ ಪರಾಶರ ಹೇಳುತ್ತಾರೆ. ಚಂದ್ರನು ರಾಜನಾಗಿದ್ದರೆ, ಸಮೃದ್ಧ ಮಳೆಯನ್ನು ನಿರೀಕ್ಷಿಸಬೇಕು;ಚಂದ್ರನು ರಾಜನಾಗಿರುವ ವರ್ಷದಲ್ಲಿ ಅವನು ಖಂಡಿತವಾಗಿಯೂ ಭೂಮಿಯನ್ನು ಬೆಳೆಗಳಿಂದ ತುಂಬಿಸುತ್ತಾನೆ

ಮತ್ತು ಮಾನವಕುಲವನ್ನು ರೋಗದಿಂದ ಮುಕ್ತಗೊಳಿಸುತ್ತಾನೆ.ಮಂಗಳವು ರಾಜನಾಗಿದ್ದರೆ, ಕಡಿಮೆ ಮಳೆಯಾಗುತ್ತದೆ.ಬುಧನು ರಾಜನಾಗಿದ್ದರೆ, ಉತ್ತಮ ಮಳೆಯನ್ನು ನಿರೀಕ್ಷಿಸಬೇಕು. ಗುರುವು ರಾಜನಾಗಿದ್ದರೆ, ರೈತರು ಅತ್ಯುತ್ತಮ ಮಳೆಯ ನಿರೀಕ್ಷೆಯಲ್ಲಿರಬೇಕು. ಶುಕ್ರನು ರಾಜನಾದರೆ ರೈತರಿಗೆ ಸಮೃದ್ಧ ಮಳೆಯಾಗುತ್ತದೆ. ಶನಿಯು ರಾಜನಾದಾಗ, ಭೂಮಿ ಶುಷ್ಕವಾಗಿರುತ್ತದೆ, ಮಳೆಯಿಲ್ಲದೆ ಮತ್ತು ಧೂಳು ತುಂಬಿರುತ್ತದೆ.

ರೋಗಗಳು ಮತ್ತು ಇತರ ವಿಷಯಗಳು -

ಸೂರ್ಯನು ವರ್ಷದ ರಾಜನಾಗಿದ್ದರೆ, ಅವನ ಆಳ್ವಿಕೆಯಲ್ಲಿ ಜನರಿಗೆ ಕಣ್ಣಿನ ತೊಂದರೆಗಳು, ಜ್ವರ, ದಬ್ಬಾಳಿಕೆ, ಕಿರುಕುಳ, ಶಬ್ದ, ತೊಂದರೆ, ವಿಪತ್ತು, ಅವಮಾನ, ದುರದೃಷ್ಟಗಳು, ಎಲ್ಲಾ ವಿಪತ್ತುಗಳು ಮತ್ತು ವೇಗದ ಗಾಳಿಗಳು ಇರುತ್ತವೆ. ಚಂದ್ರನು ವರ್ಷದ ರಾಜನಾಗಿದ್ದರೆ, ಫಲವತ್ತಾದ ಬೆಳೆಗಳಿಂದ ಸಮೃದ್ಧವಾಗುತ್ತವೆ ಹಾಗೂ ಜನರು ಆರೋಗ್ಯದಿಂದ ಇರುತ್ತಾರೆ. ಮಂಗಳನು ರಾಜನಾಗಿದ್ದಾಗ, ಆ ವರ್ಷದಲ್ಲಿ ಬೆಳೆಗಳು ನಾಶವಾಗುತ್ತವೆ, ಜನರು ಬಾಧಿತರು, ಅನಾರೋಗ್ಯವಂತರು ಮತ್ತು ಇಡೀ ವರ್ಷ ಬರಗಾಲವು ಇರುತ್ತದೆ. ಬುಧನು ರಾಜನಾಗಿರುವ ವರ್ಷದಲ್ಲಿ ರೋಗದಿಂದ ಮುಕ್ತಿ ಮತ್ತು ಒಟ್ಟಾರೆ ಸಮೃದ್ಧಿ ಇರುತ್ತದೆ. ಗುರುವು ರಾಜನಾದ ವರ್ಷದಲ್ಲಿ ಧರ್ಮ ಅಥವಾ ಧಾರ್ಮಿಕ ನಂಬಿಕೆಯು ಹೆಚ್ಚಾಗುತ್ತದೆ ಮತ್ತು ಸದ್ಗುಣಗಳ ಸ್ಥಿರತೆ, ಮನಸ್ಸಿನ ಶಾಂತಿ ಮತ್ತು ಮಳೆಗೆ ಉತ್ತಮವಾಗುತ್ತದೆ; ಯಾವಾಗಲೂ ಧಾನ್ಯದಿಂದ ತುಂಬಿರುತ್ತದೆ, ಇಡೀ ಭೂಮಿಯು ಸಂಪತ್ತಿನಿಂದ ಕೂಡಿರುತ್ತದೆ ಮತ್ತು ಒಟ್ಟಾರೆ ಸಮೃದ್ಧಿಯನ್ನು ಹೊಂದಿರುತ್ತದೆ. ರಾಜ ಶುಕ್ರನು ಯಾವಾಗಲೂ ಸಮೃದ್ಧಿಯನ್ನು ತರುತ್ತಾನೆ, ರಾಜಕುಮಾರರ ಸ್ವಾಧೀನ, ಸಂಪತ್ತು ಇತ್ಯಾದಿಗಳ ಮೇಲೆ ಪರಿಣಾಮ ಬೀರುತ್ತಾನೆ ಮತ್ತು ಭೂಮಿಯನ್ನು ಎಲ್ಲಾ ಬೆಳೆಗಳಿಂದ ತುಂಬಿಸುತ್ತಾನೆ. ಶನಿಯು ರಾಜನಾಗಿರುವ ವರ್ಷದಲ್ಲಿ, ಜನರು ಅನಗತ್ಯ ಯುದ್ಧವನ್ನು ಅನುಭವಿಸುತ್ತಾರೆ, ಕಡಿಮೆ ಮಳೆ ಮತ್ತು ರೋಗಗಳನ್ನು ಉಲ್ಲೇಖಿಸಲಾಗಿದೆ.

ಉದಾಹರಣೆ:

2020-ಶಾ.ಶ.1942 = ಶೇಷ - 4 -ಬುಧನು ರಾಜನಾಗಿರುವ ವರ್ಷದಲ್ಲಿ ಉತ್ತಮ ಮಳೆಯನ್ನು ನಿರೀಕ್ಷಿಸಬೇಕು. ರೋಗದಿಂದ ಮುಕ್ತಿ ಮತ್ತು ಒಟ್ಟಾರೆ ಸಮೃದ್ಧಿ ಇರುತ್ತದೆ.

2021-ಶಾ.ಶ.1943 = ಶೇಷ -0 -. ಶನಿಯು ರಾಜನಾದಾಗ, ಭೂಮಿ ಶುಷ್ಕವಾಗಿರುತ್ತದೆ, ಮಳೆಯಿಲ್ಲದೆ ಮತ್ತು ಧೂಳು ತುಂಬಿರುತ್ತದೆ.ಶನಿಯು ರಾಜನಾಗಿರುವ ವರ್ಷದಲ್ಲಿ, ಜನರು ಅನಗತ್ಯ ಯುದ್ಧವನ್ನು ಅನುಭವಿಸುತ್ತಾರೆ, ಕಡಿಮೆ ಮಳೆ ಮತ್ತು ರೋಗಗಳನ್ನು ಉಲ್ಲೇಖಿಸಲಾಗಿದೆ.

2022-ಶಾ.ಶ.1944 = ಶೇಷ – 3- ಮಂಗಳವು ರಾಜನಾಗಿದ್ದರೆ, ಕಡಿಮೆ ಮಳೆಯಾಗುತ್ತದೆ, ಆ ವರ್ಷದಲ್ಲಿ ಬೆಳೆಗಳು ನಾಶವಾಗುತ್ತವೆ, ಜನರು ಬಾಧಿತರು, ಅನಾರೋಗ್ಯವಂತರು ಮತ್ತು ಇಡೀ ವರ್ಷ ಬರಗಾಲವು ಇರುತ್ತದೆ.

ಕ್ರಿ.ಶ. 2024(ಶಾ.ಶ.1946) ರ ಮಳೆಯ ಪ್ರಮಾಣವು ಕೆಳಗಿನ ಲೆಕ್ಕಾಚಾರದಂತೆ ಇರುತ್ತದೆ.

{ಉದಾ- 1946*3= 5838+2=5840 /7 ಮಾಡಿದಾಗ ಶೇಷ - 2 ಉಳಿಯುತ್ತದೆ. ಆದ್ದರಿಂದ ಈ ವರ್ಷದ ರಾಜ ಚಂದ್ರ, ಪರಾಶರರ ಪ್ರಕಾರ ಚಂದ್ರನು ರಾಜನಾಗಿದ್ದರೆ, ಸಮೃದ್ಧ ಮಳೆಯನ್ನು ನಿರೀಕ್ಷಿಸಬೇಕು. ಚಂದ್ರನು ವರ್ಷದ ರಾಜನಾಗಿದ್ದರೆ, ಫಲವತ್ತಾದ ಬೆಳೆಗಳಿಂದ ಸಮೃದ್ಧವಾಗುತ್ತವೆ ಹಾಗೂ ಜನರು ಆರೋಗ್ಯದಿಂದ ಇರುತ್ತಾರೆ.

## 5. ಜಲಾಢಕವನ್ನು ನಿರ್ಣಯಿಸುವ ಬಗೆ :

ಆಢಕವೆಂದರೆ ನೂರು ಯೋಜನಾ ವಿಸ್ತೀರ್ಣ ಮತ್ತು ಮೂವತ್ತು ಯೋಜನ ಆಳವಾಗಿರುವ ನೀರಿನ ಮಾಪಕ. ಚಂದ್ರನು ಮಿಥುನ, ವೃಷಭ ಮತ್ತು ಮೀನರಾಶಿಯಲ್ಲಿ ಮತ್ತು ಸೂರ್ಯನು ಕರ್ಕಾಟಕ ರಾಶಿಯಲ್ಲಿರುವಾಗ ನೂರು ಆಢಕ ಮಳೆಯುಂಟಾಗುತ್ತದೆ. ಸೂರ್ಯ ಧನುರಾಶಿಯಲ್ಲಿ ಸಂಚರಿಸುವಾಗ 50 ಆಢಕ, ಕನ್ಯಾರಾಶಿ ಹಾಗೂ ಸಿಂಹರಾಶಿಯಲ್ಲಿರುವಾಗ 80 ಆಢಕ,ಇತರ ರಾಶಿಗಳಲ್ಲಿರುವಾಗ 96ಆಢಕ ನೀರಿನ ಪ್ರಮಾಣ ಸಂಗ್ರಹವಾಗುತ್ತದೆ. ಇಂದ್ರನು ಸಮುದ್ರದ ಮೇಲೆ 10ಭಾಗ, ಪರ್ವತಗಳ ಮೇಲೆ 6ಭಾಗ, ಪೃಥ್ವಿಯ ಮೇಲೆ ಯಾವಾಗಲೂ 4ಭಾಗ ಮಳೆಯಾಗುವಂತೆ ಮಾಡುತ್ತಾನೆ.

## 6. ಮಾಸಗಳ ಅನುಸಾರ ವೃಷ್ಟಿಜ್ಞಾನ :

*ಪೌಷಾ ಮಳೆಯ ಜ್ಞಾನ -
ಪೌಷಮಾಸದ ಶುಕ್ಲಪಕ್ಷದಲ್ಲಿ ಆಕಾಶವು ಮೋಡಗಳಿಂದ ಆವೃತವಾಗಿದ್ದರೆ ಆ ವರ್ಷ ಪೃಥ್ವಿಯು ಮಳೆಯಿಂದ ಪೂರ್ಣವಾಗಿ ಸಮೃದ್ಧಿ ಹೊಂದಲಿದೆ. ಮಳೆಯ ಅಧಿಪತಿ ಇಂದ್ರು ಮೀನ ಮತ್ತು ವೃಶ್ಚಿಕ ರಾಶಿಯ ಮಧ್ಯದಲ್ಲಿ ಮಳೆಯನ್ನು ಸುರಿಸಿದರೆ ಅಲ್ಲಿಂದ ಪ್ರಾರಂಭಿಸಿ ಏಳನೇ ತಿಂಗಳಿನಲ್ಲಿ ಅದೇ ತಿಥಿಯಲ್ಲಿ ಮಳೆಯು ಪೂರ್ಣಪ್ರಮಾಣವಾಗಿ ಸುರಿಯುತ್ತದೆ.

*ಮಾಘಮಾಸದ ಮಳೆಯ ಜ್ಞಾನ -
ಮಾಘಮಾಸದ ಶುಕ್ಲಪಕ್ಷದ ಸಪ್ತಮಿಯಿಂದ ಮೋಡ ಕಂಡುಬಂದರೆ ಅಥವಾ ಮಳೆಯಾದರೆ ಉತ್ತಮ ಮಳೆಯಾಗಿ ಭೂಮಿಯು ಸಮೃದ್ಧವಾಗುತ್ತದೆ. ಮಾಘ ಅಥವಾ ಪೌಷಮಾಸದ ಕೃಷ್ಣ ಪಕ್ಷದ ಸಪ್ತಮಿ ತಿಥಿ, ಚೈತ್ರಮಾಸದ ಶುಕ್ಲಪಕಕ್ಷದ ತೃತೀಯತಿಥಿ ಮತ್ತು ವೈಶಾಖಮಾಸದ ಪ್ರಥಮ ದಿನ ಒಂದುವೇಳೆ ಬಿರುಗಾಳಿ ಅಥವಾ ಸಿಡಿಲುಗಳಿಂದ ಕೂಡಿದ ಮಳೇ ಬಂದರೆ ಮಳೆಗಾಲದಲ್ಲಿ ಉತ್ತಮವಾದ ಮಳೆಯಾಗುತ್ತದೆ.

*ಫಾಲ್ಗುಣದ ಮಳೆಯ ಜ್ಞಾನ -
ಕುಂಭ ರಾಶಿಯಲ್ಲಿ ಸೂರ್ಯನಿರುವಾಗ ಪಂಚಮ್ಯಾದಿಯಾಗಿ ಐದು ತಿಥಿಗಳು ರೋಹಿಣಿಯೊಂದಿಗೆ ಸಂಯೋಗವಿದ್ದರೆ, ಆರಂಭದಿಂದ ಐದು ದಿನಗಳಲ್ಲಿ ಕ್ರಮವಾಗಿ ಅತ್ಯಲ್ಪ, ಅಲ್ಪ, ಮಧ್ಯಮ, ಹೆಚ್ಚು ಮತ್ತು ಅತಿ ಹೆಚ್ಚು ಇತ್ಯಾದಿ ರೀತಿಯಾಗಿ ಮಳೆಯಾಗುತ್ತದೆ.

*ಚೈತ್ರವೃಷ್ಟಿಜ್ಞಾನ -
ಚೈತ್ರಮಾಸದ ಕೃಷ್ಣ ಅಥವಾ ಶುಕ್ಲ ಪಕ್ಷದ ಮೊದಲ ದಿನ ಭಾನುವಾರವಾಗಿದ್ದರೆ, ಆ ವರ್ಷದಲ್ಲಿ ಮಧ್ಯಮ ಮಳೆಯಾಗುತ್ತದೆ; ಒಂದು ವೇಳೆ ಸೋಮವಾರವಾಗಿದ್ದರೆ ಭೂಮಿಯ ಮೇಲ್ಮೈಯು ತೀವ್ರ ಮತ್ತು ನಿರಂತರ ಧಾರಾಕಾರ ಮಳೆಯಿಂದ ಸಂಪೂರ್ಣವಾಗಿ ಮುಳುಗುತ್ತದೆ. ಒಂದು ವೇಳೆ ಮಂಗಳವಾರವಾಗಿದ್ದರೆ, ಸಾಕಷ್ಟು ಮಳೆ ಇರುವುದಿಲ್ಲ; ಒಂದು ವೇಳೆ ಬುಧವಾರ, ಗುರುವಾರ ಮತ್ತು ಶುಕ್ರವಾರವಾಗಿದ್ದರೆ ಸಮೃದ್ಧ ಬೆಳೆಯಾಗಿ ಸಂತೋಷದಾಯಕವಾಗಿರುತ್ತದೆ; ಒಂದು ವೇಳೆ ಶನಿವಾರವಾಗಿದ್ದರೆ ಸಮುದ್ರವೂ ಬತ್ತಿಹೋಗುತ್ತದೆ ಮತ್ತು ಧೂಳಿನ ಮೋಡಗಳಿಂದ ಭೂಮಿಯು ಅದೃಶ್ಯವಾಗುತ್ತದೆ.

*ವೈಶಾಖವೃಷ್ಟಿಜ್ಞಾನ -
ವೈಶಾಖ ಮಾಸದ ಶುಕ್ಲಪಕ್ಷದ ಪ್ರತಿಪದೆಯಲ್ಲಿ ಹರಿಯುತ್ತಿರುವ ನೀರಿನಲ್ಲಿರಾತ್ರಿಸಮಯದಲ್ಲಿ ದಂಡವನ್ನಿಟ್ಟು ಮಳೆಯ ಪ್ರಮಾಣವನ್ನು ಅಳೆಯಬಹುದಾಗಿದೆ.

*ಜ್ಯೇಷ್ಠವೃಷ್ಟಿಜ್ಞಾನ -
ಜ್ಯೇಷ್ಠಮಾಸದ ಚಿತ್ರ, ಸ್ವಾತಿ, ವಿಶಾಖ ನಕ್ಷತ್ರದ ಸಮಯ ಆಕಾಶದಲ್ಲಿ ಮೋಡಗಳಿಲ್ಲದಿದ್ದರೆ ಮತ್ತು ಇವೇ ನಕ್ಷತ್ರಗಳ ಸಮಯದಲ್ಲಿ ಶ್ರಾವಣಮಾಸದಲ್ಲಿ ಮಳೆಯಾದರೆ ಆ ವರ್ಷ ಒಳ್ಳೆಯ ಮಳೆಯಾಗುತ್ತದೆ.

*ಆಷಾಢ ಮಳೆಯ ಜ್ಞಾನ -
ಆಷಾಢ ಹುಣ್ಣಿಮೆಯಂದು ಗಾಳಿಯು ಪೂರ್ವ, ಆಗ್ನೇಯ,ದಕ್ಷಿಣ,ನೈಋತ್ಯ, ಪಶ್ಚಿಮ, ವಾಯುವ್ಯ, ಈಶಾನ್ಯ ದಿಕ್ಕಿಗೆ ಪ್ರವಹಿಸುತ್ತಿದ್ದರೆ ಇದು ಕ್ರಮವಾಗಿ ಉತ್ತಮ ಮಳೆ, ಬೆಳೆಗಳ ನಾಶ, ಅಲ್ಪ ಮಳೆ, ಬೆಳೆಗಳ ಹಾನಿ, ಮಳೆ,ಹವಾಮಾನಪ್ರಕೋಪ, ಭೂಮಿಯ ಮೇಲಿನ ಬೆಳೆಗಳ ಸಮೃದ್ಧಿಯನ್ನು ಸೂಚಿಸುತ್ತದೆ.

*ಶ್ರಾವಣ ಮಳೆಯ ಜ್ಞಾನ -
ಶ್ರಾವಣ ಮಾಸದಲ್ಲಿ ರೋಹಿಣಿ ನಕ್ಷತ್ರದಲ್ಲಿ ಮಳೆಯಾದರೆ, ಕಾರ್ತೀಕಶುಕ್ಲ ಏಕಾದಶಿವರೆಗೆ ಮಳೆ ಇರುತ್ತದೆ.

## 7. ಬರ ಎಚ್ಚರಿಕೆ :

ಮಂಗಳವು ಉತ್ತರ ಫಾಲ್ಗುಣಿ, ಉತ್ತರಾಷಾಢ, ಉತ್ತರ ಭಾದ್ರಪದ,ರೋಹಿಣಿ, ಶ್ರವಣ, ಹಸ್ತ, ಮೂಲ, ಜ್ಯೇಷ್ಠ, ಕೃತ್ತಿಕಾ ಮತ್ತು ಮಾಘ ನಕ್ಷತ್ರಗಳಲ್ಲಿ ಇರುವಾಗ ಅನಾವೃಷ್ಟಿ ಉಂಟಾಗುತ್ತದೆ.

## 8. ಉಪಸಂಹಾರ :

ಕೃಷಿ-ಪರಾಶರವು ಕೃಷಿಯಲ್ಲಿ ಮಳೆಯ ಮುನ್ಸೂಚನೆಗಾಗಿ ಖಗೋಳ ಜ್ಞಾನವನ್ನು ಹೇಗೆ ಬಳಸಲಾಗಿದೆ ಎಂಬುದನ್ನು ತೋರಿಸುತ್ತದೆ. ವರ್ಷದ ಅಧಿಪತಿ ಮತ್ತು ಮಂತ್ರಿ (ಶ್ಲೋಕಗಳು 11-22) ಆಗುವ ಗ್ರಹಗಳ ಆಧಾರದ ಮೇಲೆ ಒಬ್ಬರು ಮಳೆಯ ಜ್ಞಾನವನ್ನು ಹೊಂದಬಹುದು. ಗ್ರಹಗಳು ಮತ್ತು ನೈಸರ್ಗಿಕ ವಿದ್ಯಮಾನಗಳ (ಶ್ಲೋಕಗಳು 30-64) ಆಧಾರದ ಮೇಲೆ ಪೌಷ್ಯದಿಂದ ಶ್ರಾವಣದವರೆಗಿನ ವಿವಿಧ ತಿಂಗಳುಗಳಲ್ಲಿ ಮಳೆಯ ಸ್ವರೂಪವನ್ನು ನಿರ್ಧರಿಸಲು ಇದು ಸೂಚನೆಗಳನ್ನು ನೀಡುತ್ತದೆ. ಗ್ರಹಗಳ ಚಲನೆಯನ್ನು ಒಂದು ರಾಶಿಯಿಂದ ಇನ್ನೊಂದಕ್ಕೆ ಮಳೆ ಮತ್ತು ಬರವನ್ನು ಸೂಚಿಸಲು ತೆಗೆದುಕೊಳ್ಳಲಾಗುತ್ತದೆ (ಶ್ಲೋಕಗಳು 71-79) , ಗ್ರಂಥವು ಕೆಲವು ನೈಸರ್ಗಿಕ ವಿದ್ಯಮಾನಗಳನ್ನು ಮತ್ತು ಮನುಷ್ಯರು, ಪಕ್ಷಿಗಳು, ಪ್ರಾಣಿಗಳು ಇತ್ಯಾದಿಗಳ ನಡವಳಿಕೆಯನ್ನು ತಕ್ಷಣದ ಮಳೆಯನ್ನು ಸೂಚಿಸುತ್ತದೆ (ಶ್ಲೋಕಗಳು 65-70).

ಈಗಿನ ದಿನಗಳಲ್ಲಿ ಕೃಷಿಯ ಬೆಳೆಯ ಬೇಡಿಕೆ ಹೆಚ್ಚಿದೆ.ಆದ್ದರಿಂದ ಪ್ರಸ್ತುತ ದಿನಗಳಲ್ಲಿ ಭಾರತದಲ್ಲಿ ಸುಸ್ಥಿರ ಕೃಷಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು, ಪ್ರಾಚೀನ ಭಾರತದ ಕೃಷಿಯ ಸಾಂಪ್ರದಾಯಿಕ ಪದ್ಧತಿ ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ.ಪರಾಶರರು ತಮ್ಮ ಕಾಲಕ್ಕೆ ಸಂಬಂಧಿಸಿದ ಉದಾಹರಣೆಗಳನ್ನು ಬಳಸಿಕೊಂಡು ಕೃಷಿಯಲ್ಲಿ ಉತ್ತಮ ನಿರ್ವಹಣೆಯ ಮಹತ್ವವನ್ನು ಎತ್ತಿ ತೋರಿಸಿದ್ದಾರೆ. ಇಂದಿಗೂ 21ನೇ ಶತಮಾನದಲ್ಲಿ, ಭಾರತದ ಗ್ರಾಮೀಣ ಪ್ರದೇಶಗಳಲ್ಲಿನ ಬಹುಪಾಲು ರೈತರು ಗ್ರಹಗಳು ಮತ್ತು ನಕ್ಷತ್ರಗಳ ವಿಷಯದಲ್ಲಿ ಮಳೆಯ ಮುನ್ಸೂಚನೆ ಮಾತ್ರವಲ್ಲದೆ ಅನೇಕ ಇತರ ಕೃಷಿ ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ಸಮಾಲೋಚಿಸುತ್ತಾರೆ. ಉತ್ತಮ ನಿರ್ವಹಣೆಯಿಲ್ಲದೆ ಸುಸ್ಥಿರ ಕೃಷಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಕೃಷಿ ಇರುವವರೆಗೂ ಪರಾಶರರ ಕೃಷಿಮೌಲ್ಯಗಳನ್ನು ಅನುಸರಿಸಬೇಕಾಗುತ್ತದೆ. ಕೃಷಿ-ಪರಾಶರವು ನಿಸ್ಸಂದೇಹವಾಗಿ ಭಾರತೀಯ ಕೃಷಿಗೆ ಸಂಬಂಧಿಸಿದ ಅತ್ಯಂತ ಹಳೆಯ ಗ್ರಂಥಗಳಲ್ಲಿ ಒಂದಾಗಿದೆ ಎಂದು ಹೇಳಬಹುದು.

## ಆಧಾರಗ್ರಂಥಗಳು :

[1] Sadhale, N. (1999). Krishi-Parashara. *Asian Agri-History Foundation, Hyderabad*, 94.

[2] प्रो. रामचन्द्र पाण्डेय मोतीलाल बनारसीदास, कृषि-पराशर, 41-1,बंगलो रोड जवाहरनगर ,दिल्ली

[3] Shah, M., & Agrawal, D. P. Krishi-Parashara: An Early Sanskrit Text on Agriculture.

[4] Sadhale, N. (1999). Krishi-Parashara (Agriculture by Parashara).

[5] Ayangarya, V. S. (2003). Some comments on Krishi-Parashara. *Asian Agri-History (India)*, *7*(1).

[6] Nene, Y. L. (2003). Crop disease management practices in ancient medieval, and pre-modern India. *Asian Agri-History (India)*, *7*(3).

[7] Thite, G. U. (2001). KRISHI-PARASHARA (Agri-History Bulletin No. 2).

[8] Beniwal, S. P. S., Nene, L. Y., & Pandey, S. T. (2020). Relevance of Vrikshayurveda and Traditional Knowledge for Ecofriendly Sustainable Agriculture to Meet SDGs in India. *Asian Agri-History*, *24*(1).

[9] Giri, U., & Hedayetullah, M. (2020). *Text Book of Agricultural Heritage*. Scientific Publishers.

[10] Nene, Y. L. (1999). Utilizing traditional knowledge in agriculture. *Traditional knowledge system of India and Sri Lanka*, 32-38.

[11] Umadevi, M., Pushpa, R., Sampathkumar, K. P., & Bhowmik, D. (2012). Rice-traditional medicinal plant in India. *Journal of pharmacognosy and phytochemistry*, *1*(1), 06-12.

[12] Suresh, S. S., & Arulmary, D. Historical background of Indian agriculture through the ages.

[13] Willis, R. J. (2007). Ancient India, China and Japan. *The History of Allelopathy*, 53-66.

[14] Sharma, S. B., & Chowdhury, A. (2021). Phosphorus transitions in traditional eco-knowledge versus chemical based agri-amendment systems of stress-prone semi-arid tropics: Finding the real game-changer. *Ecological Indicators*, *121*, 107145.

********